# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** *"ಸ್ಪಿನ್ನಿಂಗ್ ಮಿಲ್ ಇಂಡಸ್ಟ್ರೀಸ್", "ಬಟ್ಟೆಗಳಿಗೆ ಡೈ ಮಾಡಿ ಪ್ರಿಂಟ್ ಹಾಕುವುದು", "ದರ್ಜಿ ಉದ್ದಿಮೆ", ಹಾಗೂ "ಟೆಕ್ಸ್‌ಟೈಲ್ (ಸಿಲ್ಕ್) ಉದ್ದಿಮೆ" ಈ ನಾಲ್ಕು ಅನುಸೂಚಿತ ಉದ್ದಿಮೆಗಳಿಗೆ* ಸಂಬಂಧಿಸಿದಂತೆ ಕನಿಷ್ಠ ವೇತನವನ್ನು ಪರಿಷ್ಕರಿಸಿ ನಿಗಧಿಸಪಡಿಸುವ ಸಂಬಂಧ, ಕನಿಷ್ಟ ವೇತನ ಕಾಯ್ದೆ–1948ರ ಕಲಂ 5(1)(ಬಿ) ರನ್ವಯ ಹೊರಡಿಸಿರುವ ಅಧಿಸೂಚನೆಗಳನ್ನು ಹಿಂಪಡೆದು, ಕನಿಷ್ಠ ವೇತನ ಕಾಯ್ದೆ, 1948ರ ಕಲಂ 5(1)(ಎ)ರನ್ವಯ ಈ ನಾಲ್ಕು ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಟ ವೇತನ ದರಗಳನ್ನು ನಿರ್ಧರಿಸಲು ತ್ರಿಪಕ್ಷೀಯ ಸದಸ್ಯರುಗಳನ್ನುಳ್ಳ ಸಮಿತಿಯನ್ನು ರಚಿಸುವ ಬಗ್ಗೆ.

**ಓದಲಾಗಿದೆ:** ಕಾರ್ಮಿಕ ಆಯುಕ್ತರ ಪತ್ರ ಸಂಖ್ಯೆ: ಕವೇಕಾ–2/ಇತರೆ–33/ಸ್ಪಿ.ಮಿ/2017–18, ದಿನಾಂಕ: 01–02–2018.

JLC (Min Wages) 23/03/18

********

**ಪ್ರಸ್ತಾವನೆ:–**

ಮೇಲೆ ಓದಲಾದ (1)ರ ಪತ್ರದಲ್ಲಿ *"ಸ್ಪಿನ್ನಿಂಗ್ ಮಿಲ್ಸ್", "ಬಟ್ಟೆಗಳಿಗೆ ಡೈ ಮಾಡಿ ಪ್ರಿಂಟ್ ಹಾಕುವುದು", "ಟೆಕ್ಸ್‌ಟೈಲ್ (ಸಿಲ್ಕ್)"* ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿ, ಸರ್ಕಾರವು ದಿನಾಂಕ:30–12–2017ರಂದು ಹೊರಡಿಸಿರುವ ಅಂತಿಮ ಅಧಿಸೂಚನೆಗಳಲ್ಲಿನ ಕನಿಷ್ಠ ವೇತನ ದರಗಳು ಇತರೆ ರಾಜ್ಯಗಳಲ್ಲಿನ ಕನಿಷ್ಠ ವೇತನ ದರಗಳೊಂದಿಗೆ ಹೋಲಿಕೆ ಮಾಡಿದಾಗ ಕರ್ನಾಟಕದಲ್ಲಿ ಹೆಚ್ಚಿನ ಕನಿಷ್ಠ ವೇತನ ದರಗಳು ಇರುವುದಾಗಿ ಈ ರೀತಿಯ ಕನಿಷ್ಠ ವೇತನದ ಏರಿಕೆಯು ಉದ್ದಿಮೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದ್ದು, ಟೆಕ್ಸ್‌ಟೈಲ್ ಮತ್ತು ಗಾರ್ಮೆಂಟ್ಸ್ ಉದ್ದಿಮೆಯು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧೆ ಎದುರಿಸುತ್ತಿದ್ದು, ಈ ಉದ್ದಿಮೆಗಳಲ್ಲಿ ಶೇ. 25 ರಿಂದ 30 ರಷ್ಟು ವೆಚ್ಚವು ಕಾರ್ಮಿಕ ವೆಚ್ಚವಾಗಿದ್ದು, ಈ ಎಲ್ಲಾ ಕಾರಣಗಳಿಂದ ಈ ಉದ್ದಿಮೆಗಳಿಗೆ ಹೊರಡಿಸಿರುವ ಅಧಿಸೂಚನೆಗಳನ್ನು ಹಿಂಪಡೆಯಬೇಕೆಂದು ಉದ್ದಿಮೆದಾರರು ಮನವಿ ಮಾಡಿರುತ್ತಾರೆ.

ಸದರಿ ಮನವಿಯನ್ನು ಕಾರ್ಮಿಕ ಆಯುಕ್ತರ ಪರಿಗಣನೆಗಾಗಿ ಕಳುಹಿಸಿ, ಸರ್ಕಾರವು ವರದಿ ನೀಡಲು ಸದರಿಯವರಿಗೆ ಸೂಚಿಸಿತ್ತು. ಅದರನ್ವಯ ಕಾರ್ಮಿಕ ಆಯುಕ್ತರು ಮೇಲೆ ಓದಲಾದ ವರದಿಯನ್ನು ಸಲ್ಲಿಸಿರುತ್ತಾರೆ. *"ಸ್ಪಿನ್ನಿಂಗ್ ಮಿಲ್ಸ್", "ಬಟ್ಟೆಗಳಿಗೆ ಡೈ ಮಾಡಿ ಪ್ರಿಂಟ್ ಹಾಕುವುದು", "ಟೆಕ್ಸ್‌ಟೈಲ್ (ಸಿಲ್ಕ್)"* ಉದ್ದಿಮೆಗಳಲ್ಲಿನ ಕೆಲಸದ ಸ್ವರೂಪಗಳು ಒಂದಕ್ಕೊಂದು ಸಂಬಂಧಿಸಿದ ಸ್ವರೂಪದ್ದಾಗಿದ್ದು, ಈ ಅನುಸೂಚಿತ ಉದ್ದಿಮೆಗಳು ಏಕ ಆವರಣದಲ್ಲಿ ಇದ್ದಲ್ಲಿ, ಕಾರ್ಮಿಕರು ವಿವಿಧ ರೀತಿಯ ವೇತನಗಳನ್ನು ಪಡೆದಾಗ, ತಾರತಮ್ಯದ ಭಾವನೆ ಮೂಡುವುದಲ್ಲದೆ, ಕೈಗಾರಿಕಾ ವಿವಾದಗಳು ಸಹ ಉದ್ಭವಿಸುವ ಸನ್ನಿವೇಶವಿರುತ್ತದೆ. ಆದುದರಿಂದ, ಏಕ ಕಾಲದಲ್ಲಿ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿದಲ್ಲಿ, ಕೈಗಾರಿಕಾ ವಿವಾದಗಳು ಉದ್ಭವಿಸುವ ಸಂಭವವು ಕಡಿಮೆಯಾಗುತ್ತದೆ ಎನ್ನುವ ಅಂಶವನ್ನು ಪರಿಗಣನೆಗಾಗಿ ಸಲ್ಲಿಸಿ, *"ಸ್ಪಿನ್ನಿಂಗ್ ಮಿಲ್ಸ್", "ಬಟ್ಟೆಗಳಿಗೆ ಡೈ ಮಾಡಿ ಪ್ರಿಂಟ್ ಹಾಕುವುದು", "ಟೆಕ್ಸ್‌ಟೈಲ್ (ಸಿಲ್ಕ್)" ಹಾಗೂ "ಟೈಲರಿಂಗ್ (ದರ್ಜಿ)"* ಅನುಸೂಚಿತ ಉದ್ದಿಮೆಗಳಿಗೆ ಏಕರೂಪದ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲು, ಕನಿಷ್ಠ ವೇತನ ಕಾಯ್ದೆ–1948ರ ಕಲಂ 5(1)(ಬಿ) ರನ್ವಯ ಹೊರಡಿಸಿದ ಅಧಿಸೂಚನೆಗಳನ್ನು ಹಿಂಪಡೆದು, ಕನಿಷ್ಠ ವೇತನ ಕಾಯ್ದೆ, 1948ರ 5 (1)(ಎ)ರ ಪ್ರಕಾರ ತ್ರಿಪಕ್ಷೀಯ ಸಮಿತಿಯನ್ನು ರಚಿಸಲು ಕ್ರಮಗಳನ್ನು ಕೈಗೊಳ್ಳಬಹುದಾಗಿರುತ್ತದೆ ಎಂದು ವಿವರಿಸಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಸರ್ಕಾರವು ಕೆಳಕಂಡ ಅಧಿಸೂಚನೆಗಳ ಮೂಲಕ ಈ ನಾಲ್ಕು ಅನುಸೂಚಿತ ಉದ್ದಿಮೆಗಳ ಕನಿಷ್ಟ ವೇತನವನ್ನು ಪರಿಷ್ಕರಿಸಲು ಕ್ರಮವಹಿಸಿರುತ್ತದೆ.

ಕೋಷ್ಟಕ–1 :ಸರ್ಕಾರ ಪ್ರಕಟಿಸಿರುವ ಕನಿಷ್ಟ ವೇತನ ಅಧಿಸೂಚನೆಗಳ ಪಟ್ಟಿ

| ಕ್ರ.ಸಂ. | ಅನುಸೂಚಿತ ಉದ್ದಿಮೆ | ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ಷರಾ |
|---|---|---|---|
| 1 | ಟೆಕ್ಸ್‌ಟೈಲ್ (ಸಿಲ್ಕ್) ಉದ್ದಿಮೆ | ಕಾಇ 22 ಎಲ್‌ಎಂಡಬ್ಲ್ಯೂ 2017 ದಿನಾಂಕ: 30–12–2017 | ಅಂತಿಮಅಧಿಸೂಚನೆ ಹೊರಡಿಸಲಾಗಿದೆ |
| 2 | ಸ್ಪಿನ್ನಿಂಗ್ ಮಿಲ್ಸ್ ಇಂಡಸ್ಟ್ರೀಸ್ | ಕಾಇ 21 ಎಲ್‌ಎಂಡಬ್ಲ್ಯೂ 2017 ದಿನಾಂಕ: 30–12–2017 | ಅಂತಿಮಅಧಿಸೂಚನೆ ಹೊರಡಿಸಲಾಗಿದೆ |
| 3 | ಬಟ್ಟೆಗಳಿಗೆ ಡೈ ಮಾಡಿ ಪ್ರಿಂಟ್ ಹಾಕುವುದು | ಕಾಇ 29 ಎಲ್‌ಎಂಡಬ್ಲ್ಯೂ 2017 ದಿನಾಂಕ: 30–12–2017 | ಅಂತಿಮಅಧಿಸೂಚನೆ ಹೊರಡಿಸಲಾಗಿದೆ |
| 4 | ದರ್ಜಿ ಉದ್ದಿಮೆ | ಕಾಇ 76 ಎಲ್‌ಎಂಡಬ್ಲ್ಯೂ 2017 ದಿನಾಂಕ: 22–02–2018 | ಕರಡುಅಧಿಸೂಚನೆ ಹೊರಡಿಸಲಾಗಿರುತ್ತದೆ |

ಮೇಲ್ಕಂಡ ಅಧಿಸೂಚನೆಗಳನ್ನು ಕನಿಷ್ಟ ವೇತನ ಕಾಯ್ದೆ–1948ರ ಕಲಂ 5(1)(ಬಿ) ರನ್ವಯ ಹೊರಡಿಸಲಾಗಿದ್ದು, ಸಂಯೋಜಿತ ಉದ್ದಿಮೆಯಾಗಿರುವ ಜವಳಿ ಕ್ಷೇತ್ರದಲ್ಲಿಯ ಕೆಲವು ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಟ ವೇತನ ದರಗಳನ್ನು ಅಂತಿಮಗೊಳಿಸಿ ಇನ್ನು ಕೆಲವು ಉದ್ದಿಮೆಗಳ ಕನಿಷ್ಟ ವೇತನ ದರಗಳ ಪರಿಷ್ಕರಣೆ ಪ್ರಕ್ರಿಯೆಯಲ್ಲಿರುವುದು, ಸಂಯೋಜಿತ ಉದ್ದಿಮೆಯ ಕಾರ್ಮಿಕರಲ್ಲಿ ತಾರತಮ್ಯದ ಭಾವನೆ ಹಾಗೂ ಕೈಗಾರಿಕಾ ಬಾಂಧವ್ಯದ ಸಮಸ್ಯೆಗಳನ್ನು ಉಂಟು ಮಾಡುತ್ತದೆ ಎನ್ನುವುದು ಸರ್ಕಾರಕ್ಕೆ ಮನವರಿಕೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಕನಿಷ್ಠ ವೇತನ ಕಾಯ್ದೆ–1948ರ ಪ್ರಾವಧಾನಗಳಲ್ಲಿ ತನಗೆ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಕೋಷ್ಟಕ–1 ರಲ್ಲಿಯ ಅಧಿಸೂಚನೆಗಳನ್ನು ಹಿಂಪಡೆಯಲು ನಿರ್ಧರಿಸಿರುತ್ತದೆ. ಅದೇ ಸಂದರ್ಭದಲ್ಲಿ ಜವಳಿ ಸಂಯೋಜಿತ ಉದ್ದಿಮೆಯಡಿ ಬರುವ ಕೋಷ್ಟಕ –1 ರಲ್ಲಿಯ ನಾಲ್ಕು ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ಕಾಯ್ದೆ–1948ರ ಕಲಂ 5(1)(ಎ) ರನ್ವಯ ಸಾಮಾನ್ಯವಾದ ತ್ರೀಪಕ್ಷೀಯ ಸಮಿತಿಯನ್ನು ರಚಿಸುವ ಮೂಲಕ ಏಕರೂಪದ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಿ ನಿಗಧಿಪಡಿಸಲು ನಿರ್ಧರಿಸಿ, ಸರ್ಕಾರದ ಆದೇಶ ಸಂಖ್ಯೆ: ಕಾಇ 21 ಎಲ್‌ಎಂಡಬ್ಲ್ಯೂ 2017 ಬೆಂಗಳೂರು ದಿನಾಂಕ: 22–03–2018 ಅನ್ನು ಹೊರಡಿಸುವ ಮೂಲಕ ತ್ರಿಪಕ್ಷೀಯ ಸಮಿತಿಯನ್ನು ರಚಿಸಿರುತ್ತದೆ.

ಕಾರ್ಮಿಕ ಆಯುಕ್ತರ ಪ್ರಸ್ತಾವನೆಯನ್ನು ಹಾಗೂ ತತ್ಸಂಬಂಧದ ಎಲ್ಲಾ ವಿಷಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಾಇ 21 ಎಲ್‌ಎಂಡಬ್ಲ್ಯೂ 2017 (1), ಬೆಂಗಳೂರು, ದಿನಾಂಕ: 22–03–2018.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಧಿಸೂಚನೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ತ್ರಿಪಕ್ಷೀಯ ಸಮಿತಿಯು ತನ್ನ ವರದಿಯನ್ನು ನೀಡಿ ಅದನ್ನಾಧರಿಸಿ ಸರ್ಕಾರ ಮುಂದಿನ ಆದೇಶ ಹೊರಡಿಸುವವರೆಗೆ ಹಿಂಪಡೆದು, ಸದರಿ ಅನುಸೂಚಿತ ಉದ್ದಿಮೆಗಳಿಗೆ ಸಂಬಂಧಿಸಿದಂತೆ, ತತ್ಪೂರ್ವದಲ್ಲಿಯ ಕನಿಷ್ಟ ವೇತನ ಅಧಿಸೂಚನೆಗಳನ್ವಯ ಜಾರಿಯಲ್ಲಿದ್ದ ಕನಿಷ್ಠ ವೇತನ ದರಗಳು ಪುನಃ ಯಥಾವತ್ತಾಗಿ ಜಾರಿಗೆ ಬರುತ್ತವೆಂದು ಆದೇಶಿಸಲಾಗಿರುತ್ತದೆ.

| ಕ್ರ. ಸಂ. | ಅನುಸೂಚಿತ ಉದ್ದಿಮೆ | ಅಧಿಸೂಚನೆಯ ಸಂಖ್ಯೆ ಮತ್ತು ದಿನಾಂಕ | ಷರಾ |
|---|---|---|---|
| 1. | ಸ್ಪಿನ್ನಿಂಗ್ ಮಿಲ್ಸ್ ಇಂಡಸ್ಟ್ರೀಸ್ | ಕಾಇ 21 ಎಲ್‌ಎಂಡಬ್ಲ್ಯೂ 2017, ದಿನಾಂಕ: 30-12-2017 | ಅಂತಿಮ ಅಧಿಸೂಚನೆ ಹೊರಡಿಸಿರುವುದನ್ನು ಹಿಂಪಡೆಯಲಾಗಿದೆ |
| 2. | ಬಟ್ಟೆಗಳಿಗೆ ಡೈ ಮಾಡಿ ಪ್ರಿಂಟ್ ಹಾಕುವುದು. | ಕಾಇ 29 ಎಲ್‌ಎಂಡಬ್ಲ್ಯೂ 2017,ದಿನಾಂಕ: 30-12-2017 | ಅಂತಿಮ ಅಧಿಸೂಚನೆ ಹೊರಡಿಸಿರುವುದನ್ನು ಹಿಂಪಡೆಯಲಾಗಿದೆ |
| 3. | ಟೆಕ್ಸ್‌ಟೈಲ್ (ಸಿಲ್ಕ್) | ಕಾಇ 22 ಎಲ್‌ಎಂಡಬ್ಲ್ಯೂ 2017, ದಿನಾಂಕ: 30-12-2017 | ಅಂತಿಮ ಅಧಿಸೂಚನೆ ಹೊರಡಿಸಿರುವುದನ್ನು ಹಿಂಪಡೆಯಲಾಗಿದೆ |
| 4. | ಟೈಲರಿಂಗ್ (ದರ್ಜಿ) ಉದ್ದಿಮೆ | ಕಾಇ 76 ಎಲ್‌ಎಂಡಬ್ಲ್ಯೂ 2017, ದಿನಾಂಕ:22-02-2018 | ಕರಡು ಅಧಿಸೂಚನೆಯನ್ನು ಹೊರಡಿಸಿರುವುದನ್ನು ಹಿಂಪಡೆಯಲಾಗಿದೆ. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಿ.ಎಂ.ಸಿದ್ದರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ.

ಇವರಿಗೆ,

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಈ ಆದೇಶವನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯ 200 ಪ್ರತಿಗಳನ್ನು ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು-1 ಇವರಿಗೆ, ಕಳುಹಿಸುವಂತೆ ಕೋರಲಾಗಿದೆ.

ಪ್ರತಿಗಳು:

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
2. ಮಾನ್ಯ ಕಾರ್ಮಿಕ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಜಂಟಿ ಕಾರ್ಯದರ್ಶಿರವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ, ವಿಕಾಸ ಸೌಧ,
5. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ, ವಿಕಾಸ ಸೌಧ,
6. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.